1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C. 98/2023

PW- 23

CW- 43

ಪ್ರ. ಬೋ. ದಿನಾಂಕಃ 21-03-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ದೇವರಾಜ್ |
| ತಂದೆ/ಗಂಡನ ಹೆಸರು | : | ಹನುಮಂತಪ್ಪ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ -47, ಹರಿಹರ ನಗರ ಠಾಣೆ |
| ವಾಸ | : | ಹರಿಹರ |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಾನು ಹರಿಹರ ನಗರ ಪೊಲೀಸ್ ಠಾಣೆಯಲ್ಲಿ ಐದು ವರ್ಷದಿಂದ ಪೊಲೀಸ್ ಪೇದೆಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ದಿ.16-05-2023 ರಂದು ನಮ್ಮ ಠಾಣಾ ಪಿಐ ಚಾಸಾ-55 ಇವರು ಈ ಕೇಸಿಗೆ ಸಂಬಂಧಪಟ್ಟಂತೆ ಆರೋಪಿತರನ್ನು ಪತ್ತೆ ಮಾಡಲು ನನ್ನನ್ನು ಮತ್ತು ಚಾಸಾ-44, 45 ,46 ರವರನ್ನು ನೇಮಕ ಮಾಡಿದ್ದರು. ನಂತರ ನಾವು ಹರಿಹರ ಬಸ್ ನಿಲ್ದಾಣದ ಹತ್ತಿರ ಹೋದೇವು, ಅಲ್ಲಿ ಇರಲಿಲ್ಲ. ಅಲ್ಲಿದ್ದಾಗ ನಮಗೆ ಖಚಿತ ಮಾಹಿತಿ ಬಂತು. ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿದ್ದಾರೆ ಎಂದು ಖಚಿತ ಮಾಹಿತಿ ಬಂತು. ಅಲ್ಲಿಗೆ ನಾವು ಹೋದೆವು. ಅಲ್ಲಿ ಹೊರಗಡೆ ಇದ್ದ 1 ನೇ ಆರೋಪಿ ರಾಜುನನ್ನು ಹಾಗೂ ಡ್ರೆಸ್ಸಿಂಗ್ ರೂಮಿನಲ್ಲಿದ್ದ 2 ನೇ ಆರೋಪಿ ಮಾರುತಿಯನ್ನು ಕರೆದುಕೊಂಡು ಠಾಣೆಗೆ ಬಂದು ಠಾಣಾಧಿಕಾರಿ ಮುಂದೆ ಹಾಜರುಪಡಿಸಿದೆವು. ಆ ದಿನ ಹಾಜರುಪಡಿಸಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ, ಅವರು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರಾಗಿರುತ್ತಾರೆ.

<u>ಪಾಟೀ ಸವಾಲು:-</u> ಆರೋಪಿತರಪರ ಶ್ರೀ ಪಿ ಬಿ ವಕೀಲರಿಂದ.

ಆ ದಿನ ಬೆಳಿಗ್ಗೆ 5-00 ಗಂಟೆಗೆ ನಮ್ಮನ್ನು ನೇಮಕ ಮಾಡಿದರು. ಸದರಿ ಆರೋಪಿತರ ಚಹರೆ ಪಟ್ಟಿಯ ಬಗ್ಗೆ ಯಾವುದೇ ಮಾಹಿತಿ ನಮಗೆ ನೀಡಿಲ್ಲ. 1 ನೇ ಆರೋಪಿ ಹರಿಹರ ಸರ್ಕಾರಿ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದ ಮುಂಭಾಗದಲ್ಲಿ ನಿಂತುಕೊಂಡಿದ್ದ. 2 ನೇ ಆರೋಪಿ ಆಸ್ಪತ್ರೆಯ ಒಳಗಡೆ ಡ್ರೆಸ್ಸಿಂಗ್ ರೂಮಿನಲ್ಲಿದ್ದ. 2 ನೇ ಆರೋಪಿ ಇದ್ದ ಡ್ರೆಸ್ಸಿಂಗ್ ರೂಮಿನಿನಲ್ಲಿ ನಮ್ಮ ಸಿಬ್ಬಂದಿ ಹೊರತುಪಡಿಸಿ ಡ್ರೆಸ್ಸಿಂಗ್ ಮಾಡುವವರು ಇದ್ದರು , ಅವರ ಹೆಸರು ಗೊತ್ತಿಲ್ಲ. ಒಟ್ಟು ನಾವು ನಾಲ್ಕು ಜನರಿದ್ದೇವು. ನಮ್ಮ ಠಾಣಾಧಿಕಾರಿಗಳು ನಾಲ್ಕು ಜನರನ್ನು ನೇಮಕ ಮಾಡಿದ್ದರು. ನಮ್ಮನ್ನು ಹೊರತುಪಡಿಸಿ ನಮ್ಮ ಇಲಾಖೆಯ ಯಾವುದೇ ಸಿಬ್ಬಂದಿ ಇರಲಿಲ್ಲ. ಬೆಳಿಗ್ಗೆ 5-00 ಗಂಟೆಗಿಂತ ಪೂರ್ವದಲ್ಲಿ ನಾವು ಆಸ್ಪತ್ರೆಗೆ ಭೇಟ್ಟಿ ಕೊಟ್ಟಿಲ್ಲ. ಓಪಿಡಿ ಪಕ್ಕದಲ್ಲಿರುವ ರೂಮ್ ಡ್ರೆಸ್ಸಿಂಗ್ ರೂಮ್ ಆಗಿರುತ್ತದೆ. ನಾವು ಆಸ್ಪತ್ರೆಗೆ ಹೋದಾಗ ಅಲ್ಲಿ ರಕ್ತ ಬಿದ್ದಿದ್ದು ಮತ್ತು ವಸ್ತುಗಳು ಬಿದ್ದಿದ್ದವು. ಡ್ರೆಸ್ಸಿಂಗ್ ರೂಮಿಗೆ ಹೋಗುವ ಪೂರ್ವದಲ್ಲಿ ಆಸ್ಪತ್ರೆಯ ಸಿಬ್ಬಂದಿಯನ್ನು ಚಾಸಾ-45 ವಿಚಾರ ಮಾಡಿರುತ್ತಾರೆ. ವಿಚಾರ ಮಾಡಿದ ವೈದ್ಯರ ಹೆಸರು ಗೊತ್ತಿಲ್ಲ. ಆರೋಪಿತರನ್ನು ಕರೆದುಕೊಂಡು ಠಾಣಾಧಿಕಾರಿಗಳ ಬಳಿ ಹಾಜರುಪಡಿಸುವ ಸಮಯದಲ್ಲಿ ಆರೋಪಿತರ ಕೈಯಲ್ಲಿ ಏನೇನು ವಸ್ತುಗಳು ಇದ್ದವು ಗೊತ್ತಿಲ್ಲ. ಸದರಿ ಆರೋಪಿತರ ಕೈಯಲ್ಲಿ ವಸ್ತುಗಳು ಇರಲಿಲ್ಲ. ಆರೋಪಿತರು ಹಾಕಿಕೊಂಡ ಶರ್ಟನಲ್ಲಿ ವಸ್ತುಗಳು ಇದ್ದವೋ ಇಲ್ಲವೋ ನನಗೆ ನೆನಪಿಲ್ಲ.

ನಾವು ಹೋದ ಸಮಯದಲ್ಲಿ 2 ನೇ ಆರೋಪಿಗೆ ಬ್ಯಾಂಡೇಜ್ ಹಾಕುತ್ತಿದ್ದರು. ಆಸ್ಪತ್ರೆಯಿಂದ ಆರೋಪಿತರನ್ನು ಕರೆದುಕೊಂಡು ಬರುವಾಗ ವೈದ್ಯರಿಂದ ಯಾವುದೇ ಪತ್ರವನ್ನು ಪಡೆದಿಲ್ಲ. ಆರೋಪಿತರನ್ನು ನಾವು ಕರೆದುಕೊಂಡು ಹೋಗುತ್ತೇವೆ ಅಂತಾ ಆಸ್ಪತ್ರೆಯ ವೈದ್ಯರಿಗೆ ಮನವಿ ಸಲ್ಲಿಸಿದ್ದಾಗಲಿ ಅದಕ್ಕೆ ಅವರು ಹಿಂಬರಹ ಕೊಟ್ಟಿದ್ದರಬಗ್ಗೆ ನನಗೆ ಗೊತ್ತಿಲ್ಲ ನಮ್ಮ ಹಿರಿಯ ಅಧಿಕಾರಿ ಚಾಸಾ-45 ಮಂಜುನಾಥ ರವರಿಗೆ ಗೊತ್ತು.

ಆ ದಿನ ಆಸ್ಪತ್ರೆಗೆ ನಾವು ಬೆಳಗಿನ 5-00 ಗಂಟೆಗೆ ಹೋಗಿಲ್ಲ ಎನ್ನುವುದು ಸರಿಯಲ್ಲ. ಆಸ್ಪತ್ರೆಯ ಹೊರಗೆ 1 ನೇ ಆರೋಪಿ ಆಸ್ಪತ್ರೆಯ ಒಳಗೆ 2 ನೇ ಆರೋಪಿ ಇದ್ದು, ಅವರನ್ನು ಕರೆದುಕೊಂಡು ಬಂದು ಠಾಣಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತೇವೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಾವು ಆಸ್ಪತ್ರೆಗೆ ಹೋದಾಗ ಆರೋಪಿತರು ಆಸ್ಪತ್ರೆಯಲ್ಲಿ ಇಲ್ಲದಿದ್ದರೂ ಸಹ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ , ಸದರಿ ಆರೋಪಿತರನ್ನು ಆಸ್ಪತ್ರೆಯಿಂದಕರೆದುಕೊಂಡು ಬಂದಿರುತ್ತೇವೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಬೆಳಗಿನ ಜಾವ 5-00 ಗಂಟೆಗೆ ಆಸ್ಪತ್ರೆಯ ಒಳಗೆ ಹೋದಾಗ ಆ ಸಮಯದಲ್ಲಿ ಆಸ್ಪತ್ರೆಯಲ್ಲಿ ಐದಾರು ಜನರು ಇದ್ದರು. ನಾವು ಆಸ್ಪತ್ರೆಗೆ ಹೋಗಿಲ್ಲ, ಆರೋಪಿತರನ್ನು ಕರೆದುಕೊಂಡು ಬಂದು ಠಾಣಾಧಿಕಾರಿ ಮುಂದೆ ಹಾಜರುಪಡಿಸದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರುವಿಚಾರಣೆ</u>:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ.

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.